ರಮೇಶ ಜಿ. ಬೊಂಗಾಳೆ, ಬೈಲಹೊಂಗಲ

*ಇಂದಿನ ಸ್ವಾಮೀಜಿಗಳಿಗೂ, ಅಂದಿನ ಸ್ವಾಮೀಜಿಗಳಿಗೂ ವ್ಯತ್ಯಾಸವೇನು ಸಾರ್?*



ಅವರು ರಾಮ ಎನ್ನುತ್ತಿದ್ದರು, ಇವರು ಐಷಾರಾಮ ಎನ್ನುತ್ತಾರೆ.

ಮಹಾವೀರ ಕಾಸರ, ಚೆನ್ನಗಿರಿ

*ಸಾಲ ಪಡೆದವರಿಗೆ ಮರೆವು ಹೆಚ್ಚು; ಏಕೆ?*

ಕೆಟ್ಟದ್ದನ್ನು ಮರೆಯಬೇಕು ಎನ್ನುವುದು ಅವರ ಸದುದ್ದೇಶ. ಸಾಲ ಕೆಟ್ಟದು.

ಅನಿಲ ವಿ. ಕಾಮತ್, ಕುಮಟಾ

*ಗಾಂಧೀಜಿ ಸ್ವರ್ಗದಲ್ಲಿ ಏನು ಮಾಡುತ್ತಿರಬಹುದು ಅಂಕಲ್?*

ತಮ್ಮ ಚಿತ್ರವಿರುವ note ಮಾಡುವುದಕ್ಕಿಂತ ತಮ್ಮ ತತ್ವಗಳನ್ನು note ಮಾಡಿಕೊಂಡಿದ್ದರೆ ಚೆನ್ನಿತ್ತು ಎಂದು ಯೋಚಿಸುತ್ತಿರಬಹುದು.

ಎಂ.ಎಸ್.ಅಣಜಿ ಮಂಜುನಾಥ್, ಮಾಧನಬಾವಿ

*ಚುನಾವಣಾ ಸಂದರ್ಭದಲ್ಲಿ ರಾಜಕಾರಣಿಗಳು ಜನರನ್ನು' ಪ್ರಜ್ಞಾವಂತ ಮತದಾರರೇ' ಎಂದು ಸಂಬೋಧಿಸುವುದೇಕೆ?*



ಅದು ಹೆಂಡದ ಪ್ಯಾಕೆಟ್ ಹಂಚುವುದಕ್ಕೆ ಮುಂಚೆ ಸಂಬೋಧಿಸುವ ಕ್ರಮವಂತೆ!

ಮೋಹನರಾಜು ಎಸ್.ಎ. ಶಿವಮೊಗ್ಗ

*ಕಸದಿಂದ ರಸ; ರಸದಿಂದ?*

ಕಸದ ರಸ ಬೀದಿಯಲ್ಲಿ ಹರಿಯುವುದರಿಂದ ಸೊಳ್ಳೆ, ಜಿರಳೆ, ದುರ್ನಾತ, ಡೆಂಗೂ, ಚಿಕುನ್ ಗುನ್ಯಾ, ಎಬೋಲಾ.....

ಜಯದೇವ ಹಲಕಿ, ಗೋಕಾಕ ಫಾಲ್ಸ್

*500 ರೂ ಮಾಸಾಶನದಲ್ಲಿ ಜೀವನ ನಡೆಸುವುದು ಸಾಧ್ಯವೆ?*

ವಾರಕ್ಕೊಮ್ಮೆ 500 ಕೆಜಿ ಸರ್ಕಾರಿ ಅಕ್ಕಿ ಕೊಂಡು ಮಾರ್ಕೆಟ್ ಬೆಲೆಗೆ ಮಾರಿದರೆ ಸಾಧ್ಯ.

ವಿ.ಹಮೀದ್, ವಿಟ್ಲ

*ಪ್ರೇಯಸಿಯ ಕನಸಲ್ಲಿ ನಾನು ಮಂಕಿ ತರಹ ಕಾಣಿಸ್ತೇನಂತೆ...?*

'ಕನಸಿನಲ್ಲಿ' ಎಂದು ಹೇಳಲೇ ಇಲ್ಲವಂತೆ ಆಕೆ!

ಎಂ.ಎನ್. ಸೋಮಶೇಖರ್, ಮೈಸೂರು

*ದೇವರು ದುಷ್ಟರನ್ನು ಏಕೆ ಸೃಷ್ಟಿಸಿದನು?*

ಅದು ಸೃಷ್ಟಿಸಿದ್ದಲ್ಲ; ಪ್ರತಿ ಸಾಫ್ಟ್‌ವೇರ್ ಜೊತೆಗೆ ಒಂದು ವೈರಸ್ ತೂರಿ ಬರುವುದು ಜಗದ ನಿಯಮ.

ಗಣೇಶ ಎಂ. ಪೈ, ಚಿಕ್ಕಮಗಳೂರು

*'ಆಶಾವಾದಿಯಾಗಿರು' ಎಂಬ ಗುರುವಾಕ್ಯ ಪರಿಪಾಲನೆಗಾಗಿ ಆಶಾ ಎಂಬುವಳನ್ನು ವರಿಸಲು ಹುಡುಕುತ್ತಿದ್ದೇನೆ. ಸಿಕ್ಕಿಲ್ಲ. ಏನು ಮಾಡಲಿ?*

ಸರಿಯಾಗಿ ಅರಿಯಿರಿ. 'ಆಶಾವಾದಿ' ಎಂದರೆ ಆಕೆಯ ಪತಿಯಲ್ಲ, ಆಕೆಯ ವಕೀಲ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ನಿಮ್ಮ ಅಭಿಮಾನಿ ಸಂಘ ಕಟ್ಟಬೇಕೆಂದುಕೊಂಡಿದ್ದೇವೆ. ಅನುಮತಿ ಕೊಡುವಿರಾ ರಾಂ?*

ಸಂಗ ಇರಲಿ, ಸಂಘ ಬೇಡ.

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು

*'ಅಮ್ಮಾವ್ರ ಗಂಡ' ಪದ ಬಳಕೆಗೆ ಬಂದದ್ದು ಯಾವಾಗಿನಿಂದ ರಾಮ್‌ಜೀ?*

ತ್ರೇತಾಯುಗದಲ್ಲಿ ಕೈಕೇಯಿಗೆ ದಶರಥ ಜೀ ಹುಜೂರ್ ಎಂದಾಗಿನಿಂದ.

ನವಿರವಿ, ಬಾಳೆಹೊನ್ನೂರು

*ಮೊದಲೆಲ್ಲ ಆರು, ಏಳು ಮಕ್ಕಳಿದ್ದರೂ ಅಷ್ಟೊಂದು ಆಸ್ತಿ ಮಾಡುತ್ತಿರಲಿಲ್ಲ. ಈಗ ಒಂದು, ಎರಡಕ್ಕೇಕೆ ಅಷ್ಟೊಂದು ಆಸ್ತಿ ಮಾಡುತ್ತಾರೆ?*

ಆಗಲೂ ಮಾಡುವ ಆಸೆಯಿತ್ತು. ಆದರೆ ಬಂದ ಆದಾಯವೆಲ್ಲಾ ಹತ್ತಿಪ್ಪತ್ತೂವತ್ನಲ್ವತ್ ಬಾಣಂತನಗಳಿಗೆ ಖರ್ಚಾಗಿಬಿಡುತ್ತಿತ್ತು.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಅಮರಪ್ರೇಮಿಗಳು ನಿಜಕ್ಕೂ ಹೇಗಿರುತ್ತಾರೆ?*

ಮುಕೇಶ್, ಸೈಗಲ್, ತಲತ್ ಮಹಮೂದ್, ರಫಿ, ಲತಾ ಮಂಗೇಶ್ಕರ್‌ರ ದರ್ದ್‌ಭರೀ ಗೀತ್‌ಗಳ ಖಾಯಂ ಶ್ರೋತೃಗಳಾಗಿ.

## ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ

*ಹೆಂಡತಿ ಸತ್ತಮೇಲೂ ಹೆಂಡತಿಯ ಆತ್ಮ ಗಂಡನನ್ನು ಕಾಡುವುದುಂಟಾ?*

ಇಲ್ಲ. ಬೇರೆ ಬ್ಯಾಚುಲರ್‌ರನ್ನು ಹುಡುಕಿಕೊಂಡು ಹೋಗುತ್ತದೆ; ಇವನನ್ನು ಕಾಡಲು ಹೇಗೂ ಎರಡನೆಯ ಹೆಂಡತಿ ಇರುತ್ತಾಳಲ್ಲ!

ಆರ್. ನಾಗರಾಜ್, ಗೊರೂರು

*ಪುಸ್ತಕಗಳನ್ನು ಎದೆಗವಚಿಕೊಂಡು ಓಡಾಡುವ ಹುಡುಗಿಯರೇ ಪರೀಕ್ಷೆಯಲ್ಲಿ ಮೇಲುಗೈ ಸಾಧಿಸುತ್ತಾರಲ್ಲಾ?*

ಸರಿಯೇ; ಪ್ರತಿ ಸಬ್ಜೆಕ್ಟೂ ಹೃದ್ಗತವಾಗಿರುತ್ತದಲ್ಲ!

ಹಾಡ್ಯ ಬಿ. ಜಯಾನಂದ, ಮೈಸೂರು

*ಎಲ್ಲರೂ 'ಮೂರ್ಖರ ಪೆಟ್ಟಿಗೆ' ಎನ್ನುವಾಗ ನೀವು 'ಜಾಣರ ಪೆಟ್ಟಿಗೆ' ಎನ್ನುವುದು ಸರಿಯೆ?*

ಇಲ್ಲಿ 'ಪೆಟ್ಟಿಗೆ' ಎಂದರೆ ಬಾಕ್ಸ್ ಅಲ್ಲ; ಜಾಣರು ತಮ್ಮ ನುಡಿಗಳಿಂದ ನೀಡುವ ಪೆಟ್ಟಿಗೆ ಅರ್ಥಾತ್ ಏಟಿಗೆ ಎಂದರ್ಥ.

ಎಚ್.ಜಿ. ಜಗದೀಶ್, ಮೈಸೂರು

*ನಿಮಗೆ ದೆವ್ವ, ಭೂತ, ಪಿಶಾಚಿ, ಇವುಗಳಲ್ಲಿ ನಂಬಿಕೆ ಇದೆಯೆ?*



ಊಹೂ. ನನಗೆ ವಿಧಾನಮಂಡಲದಲ್ಲಿನ ಯಾರಲ್ಲೂ ನಂಬಿಕೆ ಇಲ್ಲ.

ಜೆ.ಸಿ. ರವಿಕುಮಾರ್, ಜಯಸುವರ್ಣಪುರ

*ಸಂಸಾರದಲ್ಲಿ ಅನುಮಾನ ಬರದಂತೆ ನಡೆದುಕೊಳ್ಳುವುದು ಹೇಗೆ?*

ಸಾಧ್ಯವಿಲ್ಲ ಬಿಡಿ; ಎಲ್ಲರೂ ಎಲ್ಲರನ್ನೂ ಎಲ್ಲವನ್ನೂ ಅನುಮಾನದಿಂದ ನೋಡುವಂತೆ ಟಿವಿ ಸೀರಿಯಲ್‌ಗಳು ತರಬೇತಿ ನೀಡಿಬಿಟ್ಟಿವೆ.

ಎ. ಶಾರದ, ಕೊಟ್ಟೂರು

*ಬೇಕಾದಷ್ಟು ಪ್ರಶ್ನೆಗಳನ್ನು ಕೇಳುವ ಜನಕ್ಕೆ ಉತ್ತರಿಸುವ ನೀವು ರತಿಯೋ, ಮನ್ಮಥನೋ?*

ಕ್ಷಮಿಸಿ. ಉತ್ತರಿಸಲು ಬೇಕಾದ್ದು ರೂಪವಲ್ಲ, ವಿದ್ಯೆ. ಆದ್ದರಿಂದ ನೀವು ಕೇಳಬೇಕಾದ್ದು 'ನೀವು ಸರಸ್ವತಿಯೋ, ಬೃಹಸ್ಪತಿಯೋ?' ಎಂದು!

■ ರಾಮ್